ಬಿ.ಆರ್. ಉಷಾ, ಬೆಂಗಳೂರು

ಹುಡುಗಿಯನ್ನು ಮನೆ ತುಂಬಿಸಿಕೊಳ್ಳುವಾಗ ಅಕ್ಕಿಯನ್ನೇ ಏಕೆ ಒದೆಸುತ್ತಾರೆ?



ಬತ್ತದ ಸಿರಿ ಮನೆಯಲ್ಲೆಲ್ಲ ಹರಡಲಿ ಎಂದು.

ವಿ. ಹಮೀದ್, ವಿಟ್ಲ

ನನ್ನ ಲವರ್ ಸ್ಪರ್ಶಿಸಿದಾಗ ಕೋಪಗೊಳ್ಳುವುದೇಕೆ ಸಾರ್?

ಕೈತೊಳೆದು ಮುಟ್ಟುವಂತಿರುವಳನ್ನು ಸ್ಯಾನಿಟೈಸರ್ ಸಹ ಹಾಕಿಕೊಳ್ಳದೆ ಮುಟ್ಟಿದಿರಂತಲ್ಲ.

ಟಿ.ಎಂ. ಮಾನಪ್ಪ, ಶಿವಮೊಗ್ಗ

ಹಗಲು ಮಾತಾಡುವವರಿಗೂ, ರಾತ್ರಿ ಮಾತಾಡುವವರಿಗೂ ಏನು ವ್ಯತ್ಯಾಸ?

ರಾತ್ರಿ ಮಾತಾಡುವವರು ಪಿಸುಗುಟ್ಟಿದರೂ ಹಗಲಿನವರ ಅಬ್ಬರಕ್ಕಿಂತ ಹೆಚ್ಚು ಗಮನ ಸೆಳೆಯುವರು.

ಎಂ.ಜಿ. ರಾಮಚಂದ್ರ, ಮಂಡಗಳಲೆ

ಹೆಂಡತಿ ಅಡುಗೆಮನೆಯಲ್ಲಿ ಹಾಡುವುದು ಯಾವಾಗ ರಾಮ್?



ಗಂಡ ರುಬ್ಬುಗುಂಡಿನ/ಪಾಕಕ್ರಿಯೆಗಳ ಹಿನ್ನೆಲೆ ಸಂಗೀತ ಒದಗಿಸುವಾಗ.

ಪಿ.ಎನ್. ಶ್ರೀವತ್ಸ, ಬೆಂಗಳೂರು

ಬೋನಸ್! ಇದರ ನಿಜವಾದ ಅರ್ಥ?

ಮ್ಯಾನೇಜ್ಮೆಂಟೋರು ಕೊಡಕ್ಕೆ ಬೋ ನಸನಸೆ ಮಾಡೋ ದುಡ್ಡು ಎಂದನಾ ಲೇಬರ್ಯೂನಿಯನಿ.

ಜೆ.ಆರ್. ಆದಿನಾರಾಯಣಮುನಿ, ಬೆಂಗಳೂರು

ಧರ್ಮಗಳು ನಮಗೆ ಏನನ್ನು ಕಲಿಸುತ್ತವೆ?

ಸದ್ಯದ ಪರಿಸ್ಥಿತಿಯಲ್ಲಂತೂ ಕಚ್ಚಾಡಲು.

ಸಿಹಿಮೊಗೆ ರಮೇಶ್, ಮೈಸೂರು

ಈ ದೇಶದಲ್ಲಿ ಆರೋಪಿ, ಅಪರಾಧಿ ಮುಕ್ತ ಸಂಸತ್ತು, ವಿಧಾನಸಭೆ ಸಾಧ್ಯವಿಲ್ಲವೆ?

ಅಂತಹವರನ್ನು ನಿಲ್ಲಿಸಿ ಗೆಲ್ಲಿಸುವ ಮತದಾರ ಸಿಕ್ಕರೆ ಸಾಧ್ಯ.

ಆರ್. ಮಧುಸೂದನ್, ಹಾಸನ

ತುಲಾಭಾರ ಮಾಡಿಸಿದರೆ ಪಾಪದ ಭಾರ ಇಳಿದೀತೆ?

ಇಳಿದೀತು– ಪಾಪಿಯ ಮನದಾಳದಿಂದ ಹೊರಕ್ಕೆ.

ಮಂಡಿ ಕುಮಾರ್, ಬೆಂಗಳೂರು

ಸಾವಿನ ಸಮಯದಲ್ಲೂ ನಗುವ ವ್ಯಕ್ತಿ ಯಾರು?

ಸತ್ತವನ ವಿಲ್‌ನಿಂದ ಲಾಭ ಪಡೆಯುವವನು.

ಪಿ.ಜೆ. ರಾಘವೇಂದ್ರ, ಮೈಸೂರು

ರಾಜಕಾರಣಿಗಳು ರಾಜ್ಯಶಾಸ್ತ್ರಕ್ಕಿಂತ ಭೂಗೋಳಶಾಸ್ತ್ರವನ್ನು ಹೆಚ್ಚು ಇಷ್ಟ ಪಡುವುದೇಕೆ?

ಪದವಿ ಕುಸಿಯೆ ನೆಲವಿಹುದು ಭೂಮಿಗುಮ್ಮ ಎನ್ನುವುದಂತೆ ಪುಢಾರಿಕಗ್ಗ.

ಅನಸೂಯಾ ತ್ರಿವಿಕ್ರಮ, ಕೇದಿಗೆಮನೆ

ಇಲ್ಲೊಬ್ಬ ಹಾಲಿನವನು ನೀರಿಗೇ ಹಾಲು ಹಾಕಿ ಮಾರುತ್ತಾನಲ್ಲಾ?

ಫ್ಯಾಟ್‌ಫ್ರೀ ಡಯಟ್ ಮಿಲ್ಕ್ ಎಂದು ಮಾರಿದರೆ ಇನ್ನೂ ಹೆಚ್ಚು ಸಂಪಾದಿಸಬಹುದೆನ್ನಿ.

ಬಿದರಹಳ್ಳಿ ಚನ್ನವೀರಪ್ಪ, ಹಿರೇಹಡಗಲಿ

ಆತ್ಮಹತ್ಯೆಗೂ ಆತ್ಮ ಪರಿವರ್ತನೆಗೂ ವ್ಯತ್ಯಾಸವೇನು?

ಆತ್ಮಹತ್ಯೆಯಿಂದ ಭೂತ; ಆತ್ಮ ಪರಿವರ್ತನೆಯಿಂದ ಭವಿಷ್ಯತ್.

ಖಾದ್ರಿ ಮಂಜುಳ, ದುಬೈ

ಹಸುವಿನಂಥ ಮನಸಿರುವ ಕನ್ನಡಿಗರದು ಕರುನಾಡು ಹೇಗೆ ರಾಂ?

ಗೋಕ್ಷೀರ ವಂಚಿತ ಕರುವಿನಂತೆಯೇ ಕನ್ನಡಿಗರೂ ವಂಚಿತರಾಗುವುದರಿಂದ...

ನಾಜ್ಯೋತಿ, ಹೂವಿಹಹಡಗಲಿ

ಪ್ರಶ್ನೆ ಹೊಳೆದದ್ದು ಬರೆದಿಡಬೇಕು ಅನ್ನುವಷ್ಟರಲ್ಲಿ ಕೆಲಸದ ಗಡಿಬಿಡಿಯಲ್ಲಿ ಮರೆತುಬಿಟ್ಟಿರುತ್ತದೆ. ಅದು ಎಲ್ಲಿಗೆ ಹೋಗಿರುತ್ತದೆ?

ಬಂದ ಜಾಗಕ್ಕೇ.

## ಬಹುಮಾನಿತ ಪ್ರಶ್ನೆ

ಜಗದೀಶ್ ಬಿ. ಹೊಸೂರು, ಮೈಸೂರು

ದೇಶದ ಬಡವರೆಲ್ಲಾ ಶ್ರೀಮಂತರಾದರೆ ಏನಾಗುತ್ತದೆ?

ಇನ್ನೆರಡು ದಿನಗಳಲ್ಲಿ ಎಲೆಕ್ಷನ್ ಇದೆ ಎನ್ನುವುದು ದೃಢವಾಗುತ್ತದೆ.

ಎಂ.ಜಿ. ನೇಹವರ್ಷಿಣಿ, ಬಳ್ಳಾರಿ

ಬೆಳಗ್ಗೆ ಆರು ಗಂಟೆಗೆ ಬಾರ್ ತೆಗೆದರೆ ದೇವಸ್ಥಾನ, ಮಂದಿರಗಳ ಗತಿ?

ಹೌಸ್‌ಫುಲ್! ಹೆಂಡಕ್ಕೆ ಕೈ ಮುಗಿವ ಪ್ರತಿಯೊಬ್ಬನ ಮನೆಯಲ್ಲೂ ದೇವರಿಗೆ ಕೈಮುಗಿವ ನಾಲ್ವರಿರುತ್ತಾರೆ.

ಜೆ.ಜಿ.ಹಳ್ಳಿ ಚಿದಾನಂದ, ಹಿರಿಯೂರು

ಹಣವಂತರಿಗೇ ಹಣ ಸೇರುವುದಂತೆ. ಹಾಗಾದರೆ ಬಡವರು ಶ್ರೀಮಂತರಾಗುವುದು ಯಾವಾಗ?

ಖರ್ಚಿಗಿಂತ ಹೆಚ್ಚು ಆದಾಯ ಗಳಿಸಬೇಕೆಂಬ ಶ್ರೀಮಂತರದೇ ಮಂತ್ರವನ್ನು ಬಳಸಿದಾಗ.

ರಮಾನಂದರೆಡ್ಡಿ, ಮದಕರಿಪುರ

ತಪಸ್ಸು ಮಾಡಬೇಕೆಂದರೆ ಬೋಧಿವೃಕ್ಷವೇ ಕಾಣುತ್ತಿಲ್ಲವಲ್ಲಾ...?



ಮನಸ್ಸು ಮರ ಹತ್ತುವುದನ್ನು ನಿಗ್ರಹಿಸಿದರೆ ಬೋಡು ವೃಕ್ಷವೂ ಆದೀತು.

ರತ್ನಾ ರಾಜ್‌ಕುಮಾರ್, ಹಾಸನ

ಡ್ಯಾಡ್, ಮಮ್, ಬ್ರೋ, ಸಿಸ್... ಮುಂದೆ?

ಡೂಡ್ ಡುಡೆಟ್ ಮಗಾ ಮಚ್ಚಾ; ವಯಸ್ಸಾದಂತೆ ಮಕ್ಕಳಿಂದ ಹಚಾ ಹಚಾ...

ಎಂ.ಎಸ್. ಧರ್ಮೇಂದ್ರ, ದೊಡ್ಡಮಗ್ಗೆ

ಮೊದಲ ಅಲೆಯಲ್ಲಿ ಮಾಸ್ಕು ಹಾಕಿಕೊಳ್ಳುತ್ತಿದ್ದ ನಾವು 2ನೆ ಅಲೆಯಲ್ಲಿ ಎರಡು ಮಾಸ್ಕಿಗೆ ಬಂದಿದ್ದೇವೆ. 3ನೇ ಅಲೆಗೆ?

ವ್ಯಾಕ್ಸಿನ್ ಆಗಿದೆ. ನನಗೇನೂ ಆಗಲ್ಲ ಎನ್ನುತ್ತಾ ಲೂಸ್ ಮಾಸ್ಕ್ ಧರಿಸಿ ಲೂಸ್ಲೂಸಾಗಿ ಆಡುತ್ತೇವೆ.

■ ರಾಮ್

ಪ್ರಶ್ನೆ ಕಳುಹಿಸಲು: editorsu@sudha.co.in